

ಕುಂಭಮೇಳ ನಡೆಯುತ್ತಿರುವ ಅಲಹಾಬಾದ್ ಭಕ್ತಿಯಾತ್ರೆಯ ಜೊತೆಗೆ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಪ್ರವಾಸಕ್ಕೂ ಅತ್ಯುತ್ತಮ ತಾಣ

# ಪ್ರವಾಸಿಗರ ಅಚ್ಚುಮೆಚ್ಚು ಪ್ರಯಾಗರಾಜ್

### ಆನಂದಭವನ

ಅಲಹಾಬಾದ್ ನಗರದ ಹೃದಯಭಾಗವಾದ ಟ್ಯಾಗೂರ್ ಟೌನ್‌ನಲ್ಲಿದೆ 'ಆನಂದಭವನ'. ಕುಂಭಮೇಳ ನಡೆಯುವ ಸ್ಥಳದಿಂದ 'ಆನಂದಭವನ'ಕ್ಕೆ 2–3 ಕಿ.ಮೀ ದೂರ. ಇದು ಭಾರತದ ಮೊದಲ ಪ್ರಧಾನಿ ನೆಹರು ಕುಟುಂಬದ ಐದು ತಲೆಮಾರುಗಳು ವಾಸವಿದ್ದ ಕಟ್ಟಡ.

ಆನಂದಭವನ ಎರಡಂತಸ್ತಿನ ಕಟ್ಟಡ. ನೆಲ ಅಂತಸ್ತಿನಲ್ಲಿ ಮೋತಿಲಾಲ ನೆಹರು ಮತ್ತು ಜವಾಹರಲಾಲ ನೆಹರು ವಾಸವಿದ್ದ ಕೋಣೆಗಳಿವೆ. ಮೊದಲ ಅಂತಸ್ತಿನಲ್ಲಿ ಇಂದಿರಾಗಾಂಧಿ ಅವರು ವಾಸವಿದ್ದ ಕೊಠಡಿ ಇದೆ. ಮೇಲಂತಸ್ತಿನ ಒಂದು ಕೋಣೆ ರಾಷ್ಟ್ರಪಿತ ಮಹಾತ್ಮಗಾಂಧಿಗೆ ಮೀಸಲಾಗಿ ಇಟ್ಟಿದ್ದರಂತೆ. ಅಲಹಾಬಾದ್‌ಗೆ ಭೇಟಿ ನೀಡಿದಾಗಲೆಲ್ಲ ಗಾಂಧೀಜಿ ಈ ಕೊಠಡಿಯಲ್ಲೇ ಉಳಿಯುತ್ತಿದ್ದರಂತೆ. ಹಾಗಾಗಿ ಆ ಕೋಣೆಯಲ್ಲಿ ಗಾಂಧೀಜಿ ಅವರ ನೂಲು ತೆಗೆಯುತ್ತಿದ್ದ ಚರಕ, ಅವರು ಧರಿಸುತ್ತಿದ್ದ ಮೇಲುವಸ್ತ್ರ ಹಾಗೂ ಛಾಯಾಚಿತ್ರಗಳ ಪ್ರದರ್ಶನವಿದೆ. ಪ್ರತಿ ಕೋಣೆಯಲ್ಲೂ ರಾಷ್ಟ್ರದ ಪ್ರಮುಖ ರಾಜಕೀಯ ವಿದ್ಯಮಾನಗಳನ್ನು ನೆನಪಿಸುವ ಕಪ್ಪು ಬಿಳುಪಿನ ಛಾಯಾಚಿತ್ರಗಳಿವೆ.

ಅತ್ಯಂತ ಆಸಕ್ತಿ ಹುಟ್ಟಿಸುವ ಕೋಣೆ, ಜವಾಹರಲಾಲ್ ನೆಹರು ಅವರು ಮಲಗುತ್ತಿದ್ದ ಹಾಗೂ ಅಧ್ಯಯನ ನಡೆಸುತ್ತಿದ್ದ ಕೊಠಡಿ. ಇಲ್ಲಿ ಹಳೆಯ ಕಾಲದ ಪುಸ್ತಕ ಕಪಾಟುಗಳಿವೆ. ಅದರ ತುಂಬಾ ಮಾರ್ಕ್ಸ್ ಮತ್ತು ಲೆನಿನ್ ಅವರ ಕೃತಿಗಳಿವೆ. ಭಾರತದ ಸಂವಿಧಾನದ ಪುಸ್ತಕಗಳು, ಕಾನೂನು ಪುಸ್ತಕಗಳನ್ನು ಒಪ್ಪವಾಗಿ ಜೋಡಿಸಲಾಗಿದೆ. 1970ರಲ್ಲಿ ಇಂದಿರಾಗಾಂಧಿ ಅವರು ಅಜ್ಜ ಹಾಗೂ ಅಪ್ಪನ ನೆನಪಿಗಾಗಿ 'ಆನಂದ ಭವನ'ವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಕ್ರಮೇಣ 'ಆನಂದ ಭವನ'ವನ್ನು ಮ್ಯೂಸಿಯಂ ಆಗಿ ಪರಿವರ್ತಿಸಲಾಗಿದೆ.

### ಜವಾಹರ್ ಪ್ಲಾನಿಟೋರಿಯಂ

ಆನಂದಭವನದ ಮಗ್ಗುಲಲ್ಲೇ ನೆಹರು ಪ್ಲಾನಿಟೋರಿಯಂ ಇದೆ. 1979ರಲ್ಲಿ ಆರಂಭವಾಗಿರುವ ಈ ಮ್ಯೂಸಿಯಂ ಆರಂಭದಲ್ಲಿ ನೆಹರು–ಗಾಂಧಿ ಕುಟುಂಬದ ವಸತಿ ಗೃಹವಾಗಿತ್ತು. 1964ರಲ್ಲಿ ಆರಂಭವಾದ ಜವಾಹರಲಾಲ್ ನೆಹರು ಮೆಮೋರಿಯಲ್ ಫಂಡ್ ಈ ಮ್ಯೂಸಿಯಂ ನಿರ್ವಹಣೆ ಮಾಡುತ್ತಿದೆ.

ಶಿಕ್ಷಕರು ಮತ್ತು ಮಕ್ಕಳಿಗೆ ತುಂಬಾ ಇಷ್ಟವಾಗುವ ಸ್ಥಳ ಇದು. ಪ್ಲಾನಿಟೋರಿಯಂ ಒಳಗೆ ಪ್ರವೇಶಿಸಿದರೆ ಆಕಾಶವನ್ನು ಹೋಲುವಂತಹ ಸೂರು ಕಾಣಿಸುತ್ತದೆ. ಕೊಠಡಿಯೊಳಗೆ 80 ಆಸನಗಳಿವೆ. ಆಸನದಲ್ಲಿ ಕುಳಿತರೆ, ಮೇಲ್ಭಾಗ ಆಕಾಶದಂತೆಯೇ ಗೋಚರಿಸುತ್ತದೆ. ಒಂದು ಗಂಟೆ ಅವಧಿಯ ಪ್ರದರ್ಶನದಲ್ಲಿ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ವಿವರಣೆ ನೀಡಲಾಗುತ್ತದೆ. ಪ್ಲಾನಿಟೋರಿಯಂನಲ್ಲಿ ಶೈಕ್ಷಣಿಕ ಹಾಗೂ ವಿಜ್ಞಾನ ಮಾದರಿಗಳನ್ನು ಮಾರಾಟ ಮಾಡಲಾಗುತ್ತದೆ.

ಪ್ರವೇಶ ದರ 40 ರೂಪಾಯಿ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರವಿದೆ. ಬೆಳಿಗ್ಗೆಯಿಂದ ಸಂಜೆ 4 ಗಂಟೆವರೆಗೆ, ಒಂದು ಗಂಟೆಗೆ ಒಂದು ಪ್ರದರ್ಶನದಂತೆ ನಾಲ್ಕು ಪ್ರದರ್ಶನಗಳಿರುತ್ತವೆ. ಪ್ರತಿ ಸೋಮವಾರ ಮತ್ತು ತಿಂಗಳ

### ವಾಹನ ಸೌಲಭ್ಯ

- ಕುಂಭಮೇಳ ನಡೆಯುವ ಜಾಗದಿಂದ ಅಲಹಾಬಾದ್ ನಗರದವರೆಗೆ ನಡೆದು ಬರಬೇಕು. ಅಲ್ಲಿಂದ ಎಲ್ಲ ಕಡೆಗೂ ಆಟೊ ರಿಕ್ಷಾ ಮತ್ತು ಸೈಕಲ್ ರಿಕ್ಷಾ, ಟಾಂಗಾ ಗಾಡಿಗಳು ಲಭ್ಯವಿವೆ.
- ಕುಂಭಮೇಳ ನಡೆಯುವ ಸಂಗಮ ಮತ್ತು ನದಿ ದಡದಿಂದ ಬಹುತೇಕ ಪ್ರವಾಸಿ ತಾಣಗಳು ಒಂದೂವರೆಯಿಂದ ಮೂರೂವರೆ ಕಿ.ಮೀ. ಅಂತರದಲ್ಲಿವೆ.

### ವಾರಾಣಸಿ: 3 ತಾಸಿನ ಹಾದಿ

- ಅಲಹಾಬಾದ್ ಮತ್ತು ವಾರಾಣಸಿ ನಡುವೆ ಮೂರು ಗಂಟೆ ಹಾದಿ. ರೈಲು ಮತ್ತು ಬಸ್‌ಗಳು ಸಾಕಷ್ಟಿವೆ. ಕುಂಭಮೇಳ ವೀಕ್ಷಿಸಿದ ನಂತರ, ವಾರಾಣಸಿಗೆ ಭೇಟಿ ನೀಡಿ, ಕಾಶಿವಿಶ್ವನಾಥನ ದರ್ಶನ, ಗಂಗಾರತಿ ವೀಕ್ಷಿಸಬಹುದು. ವಾರಾಣಸಿಯಿಂದ 10 ಕಿ.ಮೀ ದೂರದಲ್ಲಿರುವ ಸಾರಾನಾಥಕ್ಕೆ ಭೇಟಿ ನೀಡಬಹುದು. ಬನಾರಸ್ ಹಿಂದೂ ವಿಶ್ವವಿದ್ಯಾಲಯವೂ ಹತ್ತಿರದಲ್ಲೇ ಇದೆ.